ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣದ ಅಧಿಕೃತ ವರದಿ.

ಘನತೆವೆತ್ತ ರಾಜ್ಯಪಾಲರಾದ ಶ್ರೀ ಹೆಚ್.ಆರ್. ಭಾರದ್ವಾಜ್ ರವರು ಬೆಳಿಗ್ಗೆ 10.55 ಗಂಟೆಗೆ ವಿಧಾನಸೌಧದ ಮಹಾದ್ವಾರದ ಬೃಹತ್ ಮೆಟ್ಟಿಲುಗಳ ಬಳಿಗೆ ಆಗಮಿಸಿದರು. ಸನ್ಮಾನ್ಯ ರಾಜ್ಯಪಾಲರು ತಮ್ಮ ಕಾರಿನಿಂದ ಇಳಿದ ಬಳಿಕ ಅವರನ್ನು ಮಾನ್ಯ ಸಭಾಧ್ಯಕ್ಷರು, ಮಾನ್ಯ ಸಭಾಪತಿಯವರು, ಮಾನ್ಯ ಮುಖ್ಯಮಂತ್ರಿಗಳು, ವಿಧಾನಸಭೆಯ ಕಾರ್ಯದರ್ಶಿಯವರು ಹಾಗೂ ವಿಧಾನ ಪರಿಷತ್ತಿನ ಕಾರ್ಯದರ್ಶಿಯವರು ಸ್ವಾಗತಿಸಿ ಮಹಾದ್ವಾರದ ಬಳಿ ಕರೆದುಕೊಂಡು ಬಂದರು. ಅಲ್ಲಿ ಈ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಯಿತು.

ಶ್ರೀ ಪಿ.ಓಂಪ್ರಕಾಶ್
ವಿಧಾನಸಭೆಯ ಕಾರ್ಯದರ್ಶಿ

ಶ್ರೀ ವಿ.ಶ್ರೀಶ್
ವಿಧಾನ ಪರಿಷತ್ತಿನ ಕಾರ್ಯದರ್ಶಿ

ಶ್ರೀ ಕಾಗೋಡು ತಿಮ್ಮಪ್ಪ
ಮಾನ್ಯ ಸಭಾಧ್ಯಕ್ಷರು

ಶ್ರೀ ಡಿ.ಹೆಚ್.ಶಂಕರಮೂರ್ತಿ
ಮಾನ್ಯ ಸಭಾಪತಿಯವರು

ಸನ್ಮಾನ್ಯ ಶ್ರೀ ಹೆಚ್.ಆರ್.ಭಾರದ್ವಾಜ್
ರಾಜ್ಯಪಾಲರು

ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಯವರು

ಶ್ರೀ ಟಿ.ಬಿ.ಜಯಚಂದ್ರ
ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು

ಎ.ಡಿ.ಸಿ

ಈ ರೀತಿ ಮೆರವಣಿಗೆಯು ವಿಧಾನಸಭಾ ಸಭಾಂಗಣದ ಕಡೆಗೆ ಆಗಮಿಸಿತು. ಸಭಾಸದನದ ದ್ವಾರದ ಬಳಿ ಮೆರವಣಿಗೆ ಬಂದ ಕೂಡಲೇ ಸನ್ಮಾನ್ಯ ರಾಜ್ಯಪಾಲರ ಆಗಮನವನ್ನು ಮಾರ್ಷಲ್‌ರವರು ಸಭೆಗೆ ತಿಳಿಸಿದರು ಮತ್ತು ರಾಷ್ಟ್ರಗೀತೆಯನ್ನು ನುಡಿಸಲಾಯಿತು. ಸನ್ಮಾನ್ಯ ರಾಜ್ಯಪಾಲರು ಸದನವನ್ನು

ಪ್ರವೇಶಿಸಿ ವೇದಿಕೆಯ ಮೇಲೆ ಕುಳಿತುಕೊಳ್ಳುವ ತನಕ ಸದಸ್ಯರೆಲ್ಲರೂ ಎದ್ದು ನಿಂತುಕೊಂಡಿದ್ದರು.

ಸಭಾಸದನದ ವೇದಿಕೆಯ ಮುಂದೆ ಬಂದ ಬಳಿಕ ಮೆರವಣಿಗೆಯು ಇಬ್ಭಾಗವಾಯಿತು. ರಾಜ್ಯಪಾಲರು ವೇದಿಕೆಯ ಮೇಲಿರುವ ತಮ್ಮ ಅಸನವನ್ನು ತಲುಪಿದ ಕೂಡಲೇ ರಾಷ್ಟ್ರಗೀತೆಯನ್ನು ನುಡಿಸಲಾಯಿತು. ವೇದಿಕೆಯ ಮೇಲೆ ಮಾನ್ಯ ಅಧ್ಯಕ್ಷರು ಸನ್ಮಾನ್ಯ ರಾಜ್ಯಪಾಲರ ಬಲಭಾಗದಲ್ಲಿಯೂ, ಮಾನ್ಯ ಸಭಾಪತಿಯವರು ಸನ್ಮಾನ್ಯ ರಾಜ್ಯಪಾಲರ ಎಡಭಾಗದಲ್ಲಿಯೂ ಕುಳಿತುಕೊಂಡಿದ್ದರು. ಸನ್ಮಾನ್ಯ ರಾಜ್ಯಪಾಲರು ವೇದಿಕೆಯ ಮಧ್ಯಭಾಗದಲ್ಲಿ ಕುಳಿತುಕೊಂಡಿದ್ದರು. ಉಭಯ ಸದನಗಳ ಕಾರ್ಯದರ್ಶಿಗಳು ವೇದಿಕೆಯ ಮುಂದಿರುವ ಆಸನದಲ್ಲಿ ಕುಳಿತುಕೊಂಡಿದ್ದರು.

1. ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣ

ಘನತೆವೆತ್ತ ರಾಜ್ಯಪಾಲರು:–

ಕರ್ನಾಟಕ ವಿಧಾನ ಪರಿಷತ್ತಿನ ಸನ್ಮಾನ್ಯ ಸಭಾಪತಿಗಳೆ
ಕರ್ನಾಟಕ ವಿಧಾನಸಭೆಯ ಸನ್ಮಾನ್ಯ ಸಭಾಧ್ಯಕ್ಷರೆ
ಸನ್ಮಾನ್ಯ ಮುಖ್ಯ ಮಂತ್ರಿಯವರೆ
ಸನ್ಮಾನ್ಯ ವಿಧಾನಸಭೇಯ ವಿರೋಧ ಪಕ್ಷದ ನಾಯಕರೆ
ಸನ್ಮಾನ್ಯ ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕರೆ

ಸನ್ಮಾನ್ಯ ಸಚಿವರೆ ಹಾಗೂ ಕರ್ನಾಟಕ ವಿಧಾನಮಂಡಲದ ಸನ್ಮಾನ್ಯ ಸದಸ್ಯರೆ

1. ಹೊಸದಾಗಿ ಆಯ್ಕೆಗೊಂಡ ವಿಧಾನಸಭೆಯನ್ನು ಹೊಂದಿರುವ ಕರ್ನಾಟಕ ವಿಧಾನಮಂಡಲದ ಈ ಜಂಟಿ ಅಧಿವೇಶನಕ್ಕೆ ತಮ್ಮೆಲ್ಲರಿಗೂ ಹೃತ್ಪೂರ್ವಕವಾದ ಮತ್ತು ಆದರದ ಸ್ವಾಗತವನ್ನು ಕೋರುತ್ತೇನೆ.

2. 2013ರ ರಾಜ್ಯ ವಿಧಾನ ಸಭಾ ಚುನಾವಣೆಯಲ್ಲಿ ಕರ್ನಾಟಕದ ಜನತೆ ಹೊಸ ಆಶೋತ್ತರಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು, ಸ್ಪಷ್ಟ ಆದೇಶದ ಮೂಲಕ ಹೊಸ ಸರ್ಕಾರ ನೀಡಿರುವುದನ್ನು ತಿಳಿಸಲು ನನಗೆ ಸಂತೋಷವಾಗುತ್ತದೆ. ರಾಜ್ಯದ ಎಲ್ಲಾ ಜಾತಿ, ಧರ್ಮ ಮತ್ತು ಪ್ರದೇಶಕ್ಕೆ ಸೇರಿದ ಮತದಾರರು ತಮ್ಮ ಮತವನ್ನು ನೀಡಿ ಹೊಸ ಸರ್ಕಾರ ರಚಿಸಲು ಅವಕಾಶ

ಮಾಡಿಕೊಟ್ಟಿದ್ದಾರೆ. ಇವರೆಲ್ಲರೂ ಕಟ್ಟಿಕೊಂಡ ಕನಸು ಮತ್ತು ಇಟ್ಟುಕೊಂಡಿರುವ ನಿರೀಕ್ಷೆ ಹುಸಿಯಾಗಲು ಬಿಡದೆ ಸಾಕಾರಗೊಳಿಸುವುದು ನನ್ನ ಸರ್ಕಾರದ ಮೊದಲ ಆದ್ಯತೆ. ಜನತೆ ಬದಲಾವಣೆಯನ್ನು ಬಯಸಿದ್ದಾರೆ. ಕೇವಲ ಬದಲಾವಣೆ ಅಲ್ಲ, ಎಲ್ಲರ ಕಣ್ಣಿಗೆ ಕಾಣುವಂತಹ ಬದಲಾವಣೆಯನ್ನು ತರುವುದು ನನ್ನ ಸರ್ಕಾರದ ಉದ್ದೇಶ.

3. ಕರ್ನಾಟಕ ಬಹುಭಾಷೆ, ಬಹುಸಂಸ್ಕೃತಿ ಮತ್ತು ಬಹುಧರ್ಮಗಳ ನೆಲೆವೀಡು. ಸೌಹಾರ್ದಯುತ ಬಾಳ್ವೆ ಇಲ್ಲಿನ ಸಹಜ ಜೀವನಕ್ರಮ. ಆದರೆ ಹೆಮ್ಮೆಪಡುವಂತಹ ಈ ಅನನ್ಯತೆಯನ್ನು ಇತ್ತೀಚಿನ ಕೆಲವು ವರ್ಷಗಳಲ್ಲಿ ರಾಜ್ಯ ಕಳೆದುಕೊಳ್ಳುತ್ತಾ ಬಂದಿರುವುದು ವಿಷಾದನೀಯ ಬೆಳವಣಿಗೆ. ಇದಕ್ಕೆ ಕಾರಣಗಳನ್ನು ಹುಡುಕಿ, ಹೊಣೆಗಾರರನ್ನು ಗುರುತಿಸಿ ದೋಷಾರೋಪ ಮಾಡುವುದರ ಬದಲು ಆಗಿರುವ ಹಾನಿಯನ್ನು ಮೊದಲು ಸರಿಪಡಿಸಬೇಕಾಗಿದೆ. ಇತರರು ನೋಡಿ ಹೆಮ್ಮೆಪಡುವಂತಿದ್ದ ಕರ್ನಾಟಕದ ಅಸ್ಮಿತೆಯನ್ನು ಪುನರ್‌ಸ್ಥಾಪನೆ ಮಾಡಬೇಕಾಗಿದೆ. ರಾಜ್ಯದ ಜನತೆ ಶಾಂತಿ ಮತ್ತು ನೆಮ್ಮದಿಯಿಂದ ಬಾಳುವಂತಹ ಸಾಮಾಜಿಕ ವಾತಾವರಣವನ್ನು ನಿರ್ಮಾಣಮಾಡಬೇಕಾಗಿದೆ.

4. ಕಳೆದ ಕೆಲವು ವರ್ಷಗಳಲ್ಲಿ ಬಯಲಿಗೆ ಬಂದ ಭ್ರಷ್ಟಾಚಾರದ ಹಗರಣಗಳಿಂದಾಗಿ ದೇಶದ ಎದುರು ಕರ್ನಾಟಕ ತಲೆ ತಗ್ಗಿಸುವಂತಾಗಿದೆ. ಸಾರ್ವಜನಿಕರ ಹಣ ಪೋಲಾಗಿ ಅಭಿವೃದ್ಧಿ ಚಟುವಟಿಕೆಗಳು ಸ್ಥಗಿತಗೊಂಡಿವೆ. ಇದರಿಂದಾಗಿ ಜನತೆ ರಾಜಕೀಯ ಪಕ್ಷಗಳ ಮೇಲಿನ ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ, ಸಾರ್ವಜನಿಕರಲ್ಲಿ ಬೆಳೆಯುತ್ತಿರುವ ತಿರಸ್ಕಾರ ಭಾವ (ಸಿನಿಕತೆ) ಪ್ರಜಾಪ್ರಭುತ್ವಕ್ಕೆ ಮಾರಕ. ಸ್ವಚ್ಛ ಮತ್ತ ಜನತೆಗೆ ಉತ್ತರದಾಯಿಯಾದ ಆಡಳಿತವನ್ನು ನೀಡುವ ಮೂಲಕ ಅಸಂತುಷ್ಟ ಜನತೆಯ ವಿಶ್ವಾಸವನ್ನು ಮರಳಿಗಳಿಸುವ ಪ್ರಯತ್ನವನ್ನು ಪ್ರಾಮಾಣಿಕತೆ ಮತ್ತು ಬದ್ಧತೆಯಿಂದ ನಮ್ಮ ಸರ್ಕಾರ ಮಾಡಲಿದೆ. ಬಿಗಿ ತಪ್ಪಿದ ಆಡಳಿತ ಭ್ರಷ್ಟಾಚಾರಕ್ಕೆ ದಾರಿಮಾಡಿಕೊಡುತ್ತದೆ ಎನ್ನುವುದರಲ್ಲಿ ಅನುಮಾನ ಇಲ್ಲ. ದಕ್ಷತೆ ಮತ್ತು ಪಾರದರ್ಶಕತೆಯಿಂದ ಕೂಡಿದ ಬಿಗಿಯಾದ ಆಡಳಿತ ಮುಂದಿನ ದಿನಗಳಲ್ಲಿ ನಮ್ಮ ಸರ್ಕಾರದ ಗುರುತು ಆಗಲಿದೆ.

5. ಸಾಮಾಜಿಕ ಸೇವೆಗೆ ಇರುವ ನೂರಾರು ದಾರಿಗಳಲ್ಲಿ ರಾಜಕೀಯವೂ ಒಂದು ಎಂದು ನಾನು ಬಲವಾಗಿ ನಂಬಿದ್ದೇನೆ. ರಾಜಕೀಯ ಅಧಿಕಾರವನ್ನು ಬಳಸಿಕೊಂಡು ಸಮಾಜದಲ್ಲಿರುವ ಬಡವರಿಗೆ ಪೋಷಣೆ, ನಿರ್ಗತಿಕರಿಗೆ ಆಸರೆ, ಅಶಕ್ತರಿಗೆ ರಕ್ಷಣೆ ಮತ್ತು ಸಾಮಾಜಿಕವಾಗಿ

ತಾರತಮ್ಯಕ್ಕೊಳಗಾದವರಿಗೆ ನ್ಯಾಯ ಒದಗಿಸುವುದು ನನ್ನ ಸರ್ಕಾರದ ಬದ್ಧತೆ. ಜಾತಿಮತಗಳ ಭೇದ ಇಲ್ಲದೆ ಸಮಾಜದಲ್ಲಿರುವ ಎಲ್ಲ ಜನವರ್ಗಗಳಿಗೂ ಎಲ್ಲ ಕ್ಷೇತ್ರಗಳಲ್ಲಿ ಅವರವರ ಜನಸಂಖ್ಯೆಗೆ ಅನುಗುಣವಾದ ಪ್ರಾತಿನಿಧ್ಯ ಸಿಗಬೇಕು ಎನ್ನುವುದು ನನ್ನ ಆಶಯ. ಹೆಚ್ಚು–ಕಡಿಮೆ, ಮೇಲು–ಕೀಳು ಯಾವುದೂ ಇಲ್ಲ. ಸಮಪಾಲು–ಸಮಬಾಳು. ನನ್ನ ದೃಷ್ಟಿಯಲ್ಲಿ ಇದೇ ಸಾಮಾಜಿಕ ನ್ಯಾಯ. ಇದಕ್ಕೆ ನನ್ನ ಸರ್ಕಾರ ಬದ್ಧವಾಗಿದೆ, ಇದರಲ್ಲಿ ಯಾವುದೇ ರಾಜಿ ಇಲ್ಲ.

6. ನನ್ನ ಸರ್ಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಜಾತಿ ಮತ್ತು ಅಲ್ಪಸಂಖ್ಯಾತ ಸಮುದಾಯದ ಕಲ್ಯಾಣಕ್ಕೆ ಬದ್ಧವಾಗಿದೆ. ಆರೋಗ್ಯ, ಶಿಕ್ಷಣ, ಉದ್ಯೋಗ ಮತ್ತು ಪೌಷ್ಠಿಕ ಆಹಾರದ ಪೂರೈಕೆಗೆ ಸಂಬಂಧಿಸಿದಂತೆ ಸಂವಿಧಾನ ಮತ್ತು ಕಾನೂನು ಪ್ರಕಾರ ಹೊಂದಿರುವ ಹಕ್ಕುಗಳನ್ನು ನಿರ್ಭಿಡೆಯಿಂದ ರಕ್ಷಿಸಲಾಗುವುದು. ಸರ್ಕಾರಿ ಮತ್ತು ಅನುದಾನಿತ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಜಾತಿ ಹಾಗೂ ಅಲ್ಪಸಂಖ್ಯಾತ ಸಮುದಾಯಕ್ಕೆ ಸಾಂವಿಧಾನಿಕವಾಗಿ ಮೀಸಲಾಗಿಟ್ಟಿರುವ ಹುದ್ದೆಗಳನ್ನು ಎರಡು ವರ್ಷಗಳ ಅವಧಿಯೊಳಗೆ ಭರ್ತಿ ಮಾಡಿಕೊಳ್ಳಲು ಸರ್ಕಾರ ಕ್ರಮಕೈಗೊಳ್ಳಲಿದೆ. ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿಮಾಡಿಕೊಳ್ಳಲು ವಿಶೇಷ ಗಮನ ನೀಡಲಾಗುವುದು. ಈ ವರ್ಗಕ್ಕೆ ಸಂಬಂಧಿಸಿದ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಯೋಜನೆಗಳ ವಿಭಿನ್ನವಾದ ಸೂತ್ರಗಳು ಮತ್ತು ಆರ್ಥಿಕ ಮಾನದಂಡಗಳನ್ನು ಪರಿಷ್ಕರಿಸಿ ಏಕರೂಪದ ನೀತಿಯನ್ನು ಜಾರಿಗೆ ತರಲಾಗುವುದು. ವಿದ್ಯಾರ್ಥಿ ವೇತನ ಪಾವತಿಗೆ ಸಂಬಧಿಸಿದಂತೆ ಬ್ಯಾಂಕ್ ಖಾತೆಗಳನ್ನು ತೆರೆಯುವ ಮತ್ತು ಅವುಗಳನ್ನು ನೇರ ಸೌಲಭ್ಯ ವರ್ಗಾವಣೆ ಯೋಜನೆಯ ಜೊತೆ ಜೋಡಿಸುವ ಕಾರ್ಯವನ್ನು ತ್ವರಿತಗೊಳಿಸಲಾಗುವುದು. ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ಹಾಸ್ಟೆಲ್‌ಗಳಲ್ಲಿ ಅವಶ್ಯಕ ಮೂಲಸೌಕರ್ಯಗಳನ್ನು ಕಲ್ಪಿಸಿ ಮೇಲ್ದರ್ಜೆಗೇರಿಸಲಾಗುವುದು.

7. ಅಧಿಸೂಚಿತ ಪರಿಶಿಷ್ಟ ಪಂಗಡಗಳು ಮತ್ತು ಇತರ ಅರಣ್ಯ ನಿವಾಸಿಗಳಿಗೆ ಸಾಗುವಳಿ ಹಕ್ಕುಗಳನ್ನು ನೀಡುವುದಕ್ಕಾಗಿ ಅರಣ್ಯ ಹಕ್ಕು ಅಧಿನಿಯಮ, 2006ರ ಮೇರೆಗೆ ಬಾಕಿ ಇರುವ ಎಲ್ಲ ಅರ್ಜಿಗಳನ್ನು ಒಂದು ವರ್ಷದೊಳಗೆ ಇತ್ಯರ್ಥಪಡಿಸಲಾಗುವುದು. ನನ್ನ ಸರ್ಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಗಳಿಂದ ವ್ಯಕ್ತಿಗತ ಫಲಾನುಭವಿಗಳು ತೆಗೆದುಕೊಂಡಿರುವ ಸಾಲಗಳ ಅಸಲು ಮತ್ತು ಬಡ್ಡಿ ಮೊತ್ತವನ್ನು ಒಂದು ಬಾರಿಯ ಕ್ರಮವಾಗಿ ಮನ್ನಾ

ಮಾಡಲು ಈಗಾಗಲೇ ತೀರ್ಮಾನ ಕೈಗೊಂಡಿದೆ ಎಂದು ಘೋಷಿಸಲು ನನಗೆ ಸಂತೋಷವಾಗುತ್ತದೆ.

8. ಸಾಮಾಜಿಕ ಕ್ಷೇತ್ರಕ್ಕೆ ಕೊಟ್ಟಷ್ಟು ಮಹತ್ವವನ್ನು ನನ್ನ ಸರ್ಕಾರ ಅಭಿವೃದ್ಧಿ ಕ್ಷೇತ್ರಕ್ಕೂ ನೀಡಲಿದೆ. ನಮ್ಮ ಹಿಂದಿನ ಸರ್ಕಾರದ ಕಾಲದಲ್ಲಿ ದೇಶದ ಉದ್ಯಮಿಗಳ ಪಾಲಿನ ಆಕರ್ಷಣೆಯ ರಾಜ್ಯ ಕರ್ನಾಟಕ ಆಗಿತ್ತು. ರಾಜ್ಯದ ಈ ಹೆಗ್ಗಳಿಕೆ ಇತ್ತೀಚಿನ ವರ್ಷಗಳ ರಾಜಕೀಯ ಅಭದ್ರತೆ ಮತ್ತು ಭ್ರಷ್ಟಚಾರದ ಹಗರಣಗಳಿಂದಾಗಿ ಹಿನ್ನಡೆ ಅನುಭವಿಸಿದೆ. ಜಾಗತಿಕವಾದ ಆರ್ಥಿಕ ಹಿಂಜರಿಕೆ ಕೈಗಾರಿಕಾ ಬೆಳವಣಿಗೆ ಕುಂಠಿತಗೊಳ್ಳಲು ಇನ್ನೊಂದು ಕಾರಣ. ಈ ಸವಾಲುಗಳನ್ನು ಎದುರಿಸಲು ಸರ್ಕಾರ ಸಮರ್ಥವಾಗಿದೆ. ಮುಖ್ಯವಾಗಿ ಉದ್ಯೋಗ ಸೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಕೈಗಾರಿಕಾ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ನಿರ್ಮಿಸಲಾಗುವುದು. ಇದಕ್ಕೆ ಅವಶ್ಯಕವಾದ ಮೂಲಭೂತ ಸೌಕರ್ಯಗಳಾದ ಭೂಮಿ, ಇಂಧನ, ನೀರು ಮತ್ತು ಸಂಪರ್ಕ ವ್ಯವಸ್ಥೆಯನ್ನು ಒದಗಿಸಲು ಸರ್ಕಾರ ತ್ವರಿತ ಕ್ರಮ ಕೈಗೊಳ್ಳಲಿದೆ. ಕೈಗಾರಿಕೆಗಳಿಗೆ ಬೇಕಾದ ಜಮೀನು ಸ್ವಾಧೀನ ಪಡಿಸಿಕೊಳ್ಳುವಾಗ ರೈತರ ಹಿತಾಸಕ್ತಿಯ ರಕ್ಷಣೆಗೆ ಸರ್ಕಾರ ವಿಶೇಷ ಗಮನ ನೀಡಲಿದೆ. 2007ರ ಮೂಲಸೌಕರ್ಯ ನಿತಿಯನ್ನು ಪರಿಷ್ಕರಿಸಲಾಗುವುದು. ರಾಜ್ಯದಲ್ಲಿ ಬಂಡವಾಳ ಹೂಡಿಕೆದಾರ ಸ್ನೇಹಿ ವಾತಾವರಣವನ್ನು ನಿರ್ಮಿಸುವ ಸಲುವಾಗಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಮಾದರಿಯ ಅನುಷ್ಠಾನಕ್ಕೆ ಉತ್ತೇಜನ ನೀಡಲಾಗುವುದು. ರೈಲು ಸಂಪರ್ಕ ಜಾಲವನ್ನು ಅಭಿವೃದ್ಧಿ ಪಡಿಸಲು ವೆಚ್ಚ ಹಂಚಿಕೆ ಆಧಾರದ ಮೇಲೆ ಯೋಜನೆಗಳನ್ನು ಕಾರ್ಯಗತಗೊಳಿಸಲು ರೈಲ್ವೆ ಸಚಿವರೊಡನೆ ಚರ್ಚಿಸಲಾಗುವುದು. 2014ರಲ್ಲಿ 3ನೇ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ನಡೆಸಲು ಉದ್ದೇಶಿಸಿದೆ. ಏಕಗವಾಕ್ಷಿ ಅನುಮೋದನಾ ವ್ಯವಸ್ಥೆಯನ್ನು ಬಲಪಡಿಸಲು ಸಕಲ ಪ್ರಯತ್ನಗಳನ್ನು ಮಾಡುವುದು ಈ ಸರ್ಕಾರದ ಆದ್ಯತೆಯಾಗಿರುತ್ತದೆ. ಜವಳಿ ಉದ್ಯಮಗಳಿಗೆ ಆಕರ್ಷಕ ಪ್ರೋತ್ಸಾಹಕಳನ್ನು ನೀಡುವುದರೊಂದಿಗೆ ಮತ್ತು ಜವಳಿ ಉದ್ಯಮವನ್ನು ಜಾಗತಿಕವಾಗಿ ಎದುರಾಗುವ ಸ್ಪರ್ಧೆಯನ್ನು ಎದುರಿಸಲು ಸನ್ನದ್ಧಗೊಳಿಸುವ ಸಲುವಾಗಿ ಹೊಸ ಜವಳಿ ನೀತಿಯನ್ನು ರೂಪಿಸಲು ಉದ್ದೇಶಿಸಲಾಗಿದೆ.

9. ಕರ್ನಾಟಕ ಪ್ರವಾಸೋದ್ಯಮದ ಸಾಮರ್ಥ್ಯವನ್ನು ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಿಕೊಳ್ಳಲು ನಾವು ಮೂಲ ಸೌಕರ್ಯವನ್ನು ಮೇಲ್ದರ್ಜೆಗೇರಿಸಿ ಮತ್ತು ಕೌಶಲ್ಯತೆಗಳು ಹಾಗೂ ಸೇವೆಗಳಿಗೆ ಉತ್ತೇಜನ ನೀಡುವ ಮೂಲಕ ಪ್ರಯತ್ನಿಸುತ್ತೇವೆ. ಸರ್ಕಾರವು ಮಾಹಿತಿ ತಂತ್ರಜ್ಞಾನ ಹಾಗೂ

ಜೈವಿಕ ತಂತ್ರಜ್ಞಾನ ವಲಯಗಳ ಬೆಳವಣಿಗೆಗೆ ವಿಶೇಷವಾಗಿ, 2ನೇ ಶ್ರೇಣಿಯ ನಗರಗಳಲ್ಲಿ ಹೆಚ್ಚಿನ ಆದ್ಯತೆಯನ್ನು ನೀಡುತ್ತದೆ. ಕರ್ನಾಟಕವು ಈ ವಲಯಗಳಿಂದ ಗಳಿಸಿದ ರಾಷ್ಟ್ರದ ರಫ್ತು ರಾಜಸ್ವಗಳಿಗೆ ಮೂರನೇ ಒಂದರಷ್ಟಕ್ಕಿಂತ ಹೆಚ್ಚಿನ ಕೊಡುಗೆ ಸಲ್ಲಿಸುತ್ತಿದೆ. ನನ್ನ ಸರ್ಕಾರವು ಮಾಹಿತಿ ತಂತ್ರಜ್ಞಾನ ಬಂಡವಾಳ ಹೂಡಿಕೆ ಪ್ರದೇಶದ (ಐೈಆರ್) ಸ್ಥಾಪನೆಯನ್ನು ತ್ವರಿತಗೊಳಿಸಲು ಉದ್ದೇಶಿಸಿದ್ದು, ಇದಕ್ಕಾಗಿ ಭಾರತ ಸರ್ಕಾರವು ತಾತ್ವಿಕ ಅನುಮೋದನೆಯನ್ನು ನೀಡಿದೆ. ನನ್ನ ಸರ್ಕಾರವು ವಿದ್ಯುನ್ಮಾನ ಮತ್ತು ಹಾರ್ಡ್‌ವೇರ್ ವಲಯದ ಬಗ್ಗೆಯೂ ಕೂಡ ಒತ್ತು ನೀಡಲಿದೆ ಮತ್ತು ಕರ್ನಾಟಕ ಮಾಹಿತಿ ಸಂವಹನ ತಂತ್ರಜ್ಞಾನ ತಂಡದ ವರದಿಯನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲಿದೆ.

10. ಧಾರ್ಮಿಕ ಅಲ್ಪ ಸಂಖ್ಯಾತರ, ಅದರಲ್ಲೂ ವಿಶೇಷವಾಗಿ ತೀವ್ರ ಅವಕಾಶ ವಂಚಿತರಾಗಿರುವ ಮುಸ್ಲಿಂ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಉನ್ನತೀಕರಣಕ್ಕಾಗಿ ನ್ಯಾಯಮೂರ್ತಿ ರಂಗನಾಥ ಮಿಶ್ರಾ ಆಯೋಗ ಮತ್ತು ನ್ಯಾಯಮೂರ್ತಿ ಸಾಚಾರ್ ಸಮಿತಿ ವರದಿಯು ಮಾಡಿರುವ ಶಿಫಾರಸುಗಳ ಆಧಾರದಲ್ಲಿ ಕ್ರಮಕೈಗೊಳ್ಳಲಾಗುವುದು. ಶಾಲೆಗಳು, ಉನ್ನತ ಶಿಕ್ಷಣ ಸಂಸ್ಥೆಗಳು ಮತ್ತು ಆರೋಗ್ಯ ಸೇವೆಗಳನ್ನು ಅವರು ಪಡೆಯುವಂತೆ ಉತ್ತೇಜನ ನೀಡುವುದರ ಜೊತೆಗೆ ಅದರ ಮೇಲ್ವಿಚಾರಣೆ ಮಾಡಲಾಗುವುದು. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಅವರ ಭಾಗವಹಿಸುವುಕೆಯನ್ನು ಪ್ರೋತ್ಸಾಹಿಸುವುದು ಮಾತ್ರವಲ್ಲ ಬ್ಯಾಂಕ್ ಸಾಲ ಪಡೆಯಲು ಅವರಿಗೆ ಅನುಕೂಲ ಮಾಡಿಕೊಡುವುದು ಸೇರುತ್ತದೆ.

11. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರೆತಿರುವ ಹಿನ್ನೆಲೆಯಲ್ಲಿ, ಶಾಸ್ತ್ರೀಯ ಭಾಷಾ ಸಂಶೋಧನಾ ಕೇಂದ್ರವನ್ನು ಸ್ಥಾಪನೆ ಮಾಡುವ ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ತುಳು, ಕೊಂಕಣಿ, ಕೊಡವ, ಬ್ಯಾರಿ, ಲಂಬಾಣಿ ಮುಂತಾದ ಪ್ರಾದೇಶಿಕ ಭಾಷೆಗಳ ಅಭಿವೃದ್ಧಿಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು.

12. ನನ್ನ ಸರ್ಕಾರವು ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಹಿಂಸಾಚಾರದ ಘಟನೆಗಳ ಬಗ್ಗೆ ತೀವ್ರ ಕಳವಳ ಹೊಂದಿದೆ. ಮಹಿಳೆಯರು, ಅದರಲ್ಲೂ ವಿಶೇಷವಾಗಿ ವಿಧವೆಯರು ಮತ್ತು ಒಂಟಿ ಮಹಿಳೆಯರು ಸೇರಿದಂತೆ ಅಸಹಾಯಕ ಮಹಿಳೆಯರು ಸುರಕ್ಷಿತವಾದ ಮತ್ತು ಸುಭದ್ರವಾದ ಪರಿಸರದಲ್ಲಿ ಗೌರವದಿಂದ ಜೀವನ ನಡೆಸಲು ಮತ್ತು ಕೆಲಸ ಮಾಡಲು ಸಾಧ್ಯವಾಗುವಂತಹ ವಾತಾವರಣವನ್ನು ಕಲ್ಪಿಸಲಾಗುವುದು. ನನ್ನ ಸರ್ಕಾರವು, ಲೈಂಗಿಕ

ಅಪರಾಧಗಳಿಂದ ಮಕ್ಕಳ ಸಂರಕ್ಷಣೆ ಅಧಿನಿಯಮ, 2012 ಮತ್ತು ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ಪ್ರತಿಬಂಧ, ನಿಷೇಧ ಮತ್ತು ನಿವಾರಣೆ) ಅಧಿನಿಯಮ, 2013 ಕುರಿತು ತರಲಾಗಿರುವ ಈ ಎರಡು ನೂತನ ಕೇಂದ್ರ ಕಾನೂನುಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದು. ಈ ಕಾನೂನುಗಳು ಅಪರಾಧಗಳನ್ನು ಎಸಗುವ ಅಥವಾ ಅಂಥ ಅಪರಾಧಗಳಿಗೆ ದುಲರಣೆ ನೀಡುವ ವ್ಯಕ್ತಿಗಳಿಗೆ ಕಠಿಣ ಶಿಕ್ಷೆಯನ್ನು ವಿಧಿಸಲು ಅವಕಾಶ ಕಲ್ಪಿಸುತ್ತವೆ.

13. ರಾಜ್ಯದಲ್ಲಿ ಲಿಂಗಾಧಾರಿತ ಆಯವ್ಯಯದ ಗುಣಮಟ್ಟವನ್ನು ಹೆಚ್ಚಿಸಬೇಕಾದ ಅಗತ್ಯವಿದೆ. ನನ್ನ ಸರ್ಕಾರವು ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನಾ ಮತ್ತು ಲಿಂಗಾಧಾರಿತ ಆಯುವ್ಯಯದಲ್ಲಿ ಸೇರಿಸಲಾದ ಯೋಜನೆಗಳನ್ನು ಸಮಗ್ರವಾಗಿ ಪರಿಶೀಲಿಸಿ, ಎಲ್ಲಾ ವಲಯಗಳಲ್ಲಿ ಯೋಜನೆಗಳು ಮತ್ತು ಕಾರ್ಯ ಯೋಜನೆಗಳ ರಚನೆಯಲ್ಲಿ ಲಿಂಗ ಮತ್ತು ಸಮಾನತೆ ದೃಷ್ಟಿಕೋನದ ಸಮಗ್ರ ಸಂಯೋಜನೆಯನ್ನು ಖಚಿತಪಡಿಸಿಕೊಳ್ಳಲು ಮಾನದಂಡಗಳು ಮತ್ತು ಮಾರ್ಗಸೂಚಿಗಳನ್ನು ಸೂಚಿಸಲಿದೆ. ನನ್ನ ಸರ್ಕಾರವು, ಮಹಿಳಾ ಸ್ವಸಹಾಯ ಗುಂಪುಗಳ ಆವರ್ತಕ ನಿಧಿಯನ್ನು ಹೆಚ್ಚಿಸುವುದರ ಮೂಲಕ ಮತ್ತು ಅವುಗಳಿಗೆ ಪ್ರತ್ಯೇಕವಾದ ಬ್ಯಾಂಕಿಂಗ್ ಹಾಗೂ ಮಾರುಕಟ್ಟೆ ಸೌಲಭ್ಯಗಳನ್ನು ಕಲ್ಪಿಸುವುದರ ಮೂಲಕ ಅವುಗಳನ್ನು ಸಶಕ್ತಗೊಳಿಸಲು ಸಹ ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳಲಿದೆ. ಕೇಂದ್ರ ಸರ್ಕಾರವು, ಸಮಗ್ರ ಶಿಶು ಅಭಿವೃದ್ಧಿ (ಐಸಿಡಿಎಸ್) ಯೋಜನೆಯ ಪುನಾರಚನೆಗೆ ಮತ್ತು ಬಲಪಡಿಸುವುಕೆಗೆ ಅನುಮೋದನೆ ನೀಡಿದೆ. ನಾವು ಮಕ್ಕಳ ಆರೋಗ್ಯ, ಪೌಷ್ಟಿಕಾಂಶ, ಸೋಂಕು ಪ್ರತಿರಕ್ಷೆ ಮತ್ತು ಶಾಲಾ ಪೂರ್ವ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸುವುದಕ್ಕಾಗಿ ಪರಿಷ್ಕೃತ ಮಾನದಂಡಗಳ ಸಂಪೂರ್ಣ ಪ್ರಯೋಜನವನ್ನು ಪಡೆಯಲಿ-ದ್ದೇವೆಂದು ಖಚಿತಪಡಿಸುತ್ತೇವೆ.

14. ಸಮಾಜ ಮತ್ತು ಅಭಿವೃದ್ಧಿಯ ಎಲ್ಲಾ ವಿಷಯಗಳಲ್ಲಿ ವಿಕಲಚೇತನರು ಸಂಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಪಾಲ್ಗೊಳ್ಳು-ವಂತೆ ಉತ್ತೇಜಿಸುವ ನಿಟ್ಟಿನಲ್ಲಿ ನನ್ನ ಸರ್ಕಾರವು ಪ್ರಯತ್ನಿಸಲಿದೆ. ನಾವು, ಸಾರ್ವಜನಿಕ ಕಟ್ಟಡಗಳು ಮತ್ತು ಕೆಲಸದ ಸ್ಥಳಗಳು, ಶಿಕ್ಷಣ ಮತ್ತು ಆರೋಗ್ಯ ಸೇವೆಗಳು, ಸಾರಿಗೆ ಹಾಗೂ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನಗಳಂಥ ಭೌತಿಕ ಪರಿಸರಕ್ಕೆ ಪ್ರವೇಶಿಸಲು ಅಡೆತಡೆ ರಹಿತ ಪ್ರವೇಶ ಮಾರ್ಗವನ್ನು ನಿರ್ಮಿಸಲು ಉತ್ತೇಜಿಸುವ ಸಲುವಾಗಿ ಕ್ರಮಗಳನ್ನು ಜಾರಿಗೊಳಿಸಲಿದ್ದೇವೆ. ಅವರಿಗೆ ಉದ್ಯೋಗವಕಾಶ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು.

15. ನನ್ನ ಸರ್ಕಾರವು ಸಾಮಾನ್ಯವಾಗಿ ಶಿಕ್ಷಣ ವಲಯಕ್ಕೆ ಮತ್ತು ವಿಶೇಷವಾಗಿ ಶಾಲಾ ಶಿಕ್ಷಣಕ್ಕೆ ಅತಿ ಹೆಚ್ಚಿನ ಆದ್ಯತೆ ನೀಡುತ್ತದೆ. ಎಲ್ಲಾ ಪ್ರಾಥಮಿಕ ಶಾಲೆಗಳು ಸಾಕಷ್ಟು ಸಂಖ್ಯೆಯ ಶಿಕ್ಷಕರು, ಶಾಲಾ ಕೊಠಡಿಗಳು, ಕುಡಿಯುವ ನೀರು ಮತ್ತು ಬಾಲಕರು ಹಾಗೂ ಬಾಲಕಿಯರಿಗೆ ಪ್ರತ್ಯೇಕವಾದ ಶೌಚಾಲಯಗಳ ವ್ಯವಸ್ಥೆ ಮಾಡುವುದೂ ಸೇರಿದಂತೆ ಶಿಕ್ಷಣ ಹಕ್ಕು ಅಧಿನಿಯಮದ ಮೇರೆಗೆ ನಿಗದಿಪಡಿಸಲಾದ ಮಾನದಂಡಗಳಿಗೆ ಮತ್ತು ಗುಣಮಟ್ಟಗಳಿಗೆ ಅನುಗುಣವಾಗಿ-ರುವಂತೆ ನಾವು ನೋಡಿಕೊಳ್ಳಲಿದ್ದೇವೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಅನುಪಾತವನ್ನು ಗಮನದಲ್ಲಿಟ್ಟುಕೊಂಟು ಶಾಲೆಗಳ ವ್ಯವಸ್ಥೆಯನ್ನು ಪುನರ್‌ರಚಿಸಲಾಗುವುದು. ರಾಜ್ಯದಲ್ಲಿರುವ ಎಲ್ಲಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಸರ್ಕಾರ ಬದ್ಧವಾಗಿದೆ. ಸರ್ಕಾರಿ ಶಾಲೆಯನ್ನು, ಯಾವುದೇ ನೆಪವೊಡ್ಡಿ ಮುಚ್ಚುವುದಿಲ್ಲ. ಕಲಿಕೆಯನ್ನು ಹೆಚ್ಚು ಚಟುವಟಿಕೆ ಆಧಾರಿತ, ಮಕ್ಕಳ ಕೇಂದ್ರಿತ ಹಾಗೂ ಮಕ್ಕಳ ಸ್ನೇಹಿಯನ್ನಾಗಿಸಲು ಬೋಧನೆಯ ಗುಣಮಟ್ಟವನ್ನು ಹೆಚ್ಚಿಸುವ ಬಗ್ಗೆ ಒತ್ತು ನೀಡಲಾಗುವುದು. ಸರ್ಕಾರಿ ಶಾಲೆಗಳಿಗೆ ಆಟಗಳು ಮತ್ತು ಕ್ರೀಡೆಗಳಿಗಾಗಿ ಸೌಲಭ್ಯಗಳನ್ನು ಒದಗಿಸಲಾಗುವುದು ಮತ್ತು ಶಾಲಾ ಉದ್ಯಾನಗಳನ್ನು ಬೆಳೆಸಲು ಮಕ್ಕಳಿಗೆ ಪ್ರೋತ್ಸಾಹ ನೀಡಲಾಗುವುದು.ನಾವು ಶಿಕ್ಷಣ ಹಕ್ಕು ಅಧಿನಿಯಮದ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡು ಎಂಟು ವರ್ಷದ ಪ್ರಾಥಮಿಕ ಶಿಕ್ಷಣ ಚಕ್ರದೆಡೆಗೆ ಕೂಡ ಮುನ್ನಡೆಯಲ್ಲಿದ್ದೇವೆ. ನಿವೃತ್ತಿ ಕಾರಣದಿಂದ ತೆರವಾದ ಖಾಲಿ ಹುದ್ದೆಗಳಿಗೆ ಪ್ರತಿಯಾಗಿ ನಿಯತಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಅನುವು ಮಾಡಿಕೊಡುವ ನಿಟ್ಟಿನಲ್ಲಿ ವಾರ್ಷಿಕವಾಗಿ ಶಿಕ್ಷಕರ ಅರ್ಹತಾ ಪರೀಕ್ಷೆಗಳನ್ನು ನಡೆಸಲಾಗುವುದು. ಅಲ್ಪಸಂಖ್ಯಾತರ ಸಂಸ್ಥೆಗಳಿಗೆ ನುರಿತ ಕನ್ನಡ ಶಿಕ್ಷಕರನ್ನು ನೇಮಿಸಲಾಗುವುದು. ಪ್ರತಿಯೊಂದು ಶಾಲೆಯಲ್ಲಿ ನಿಗದಿತ ಮಕ್ಕಳು-ಶಿಕ್ಷಕರ ಪ್ರಮಾಣಕ್ಕೆ ತಕ್ಕಂತೆ ವಿಷಯ ಬೋಧಕರು ಲಭ್ಯವಿರುವ ಹಾಗೆ ಶಿಕ್ಷಕರ ಮರು ಸ್ಥಳ ನಿಯೋಜನೆಗೆ ಮೊದಲ ಆದ್ಯತೆ ನೀಡಲಾಗುವುದು. ಮಹಿಳೆಯರು ಮತ್ತು ಇತರ ಅವಕಾಶ ವಂಚಿತ ಸಮೂಹಗಳಲ್ಲಿ ಸಾಕ್ಷರತೆಯನ್ನು ಪ್ರೋತ್ಸಾಹಿಸಲು ನಾವು ನಮ್ಮ ಸರ್ವ ಪ್ರಯತ್ನಗಳನ್ನು ಮಾಡಲಿದ್ದೇವೆ.

16. ವಿಶ್ವವಿದ್ಯಾಲಯಗಳು, ಕಾಲೇಜುಗಳು ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಅಧಿಕ ಪ್ರಮಾಣದ ಬೋಧಕ ಹುದ್ದೆಗಳು ಖಾಲಿ ಬಿದ್ದಿರುವ ಕಾರಣದಿಂದಾಗಿ ಉನ್ನತ ಶಿಕ್ಷಣದ ಗುಣಮಟ್ಟ ಕ್ಷೀಣಿಸಿದೆ. ನನ್ನ ಸರ್ಕಾರವು ಎಲ್ಲಾ ಬೋಧಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಒಂದು ಖಚಿತ ಪ್ರಯತ್ನವನ್ನು ಮಾಡಲಿದೆ. ಉದ್ಯೋಗ ಪಡೆಯುವ ಅರ್ಹತೆಯನ್ನು ಸುಧಾರಿಸಲು ಮತ್ತು

ಎಲ್ಲರಿಗೂ ಯುಕ್ತ ಕೆಲಸದ ಅವಕಾಶವನ್ನು ಕಲ್ಪಿಸಲು ಕೌಶಲ್ಯವನ್ನು ಅಭಿವೃದ್ಧಿಪಡಿಸುವುದು ನನ್ನ ಸರ್ಕಾರದ ಒಂದು ಮುಖ್ಯ ಆದ್ಯತೆಯಾಗಿರುತ್ತದೆ. ಕೈಗಾರಿಕೆ ಹಾಗೂ ಉದ್ಯೋಗದಾತರ ಸಕ್ರಿಯ ಬೆಂಬಲದೊಂದಿಗೆ ತರಬೇತಿ ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸುವ ಮತ್ತು ಅವುಗಳ ವ್ಯಾಪ್ತಿಯನ್ನು ವಿಸ್ತರಿಸುವ ಮೂಲಕ ಅಗತ್ಯತೆ ಆಧಾರಿತ ಕೌಶಲ್ಯ ತರಬೇತಿ ಸಂಸ್ಥೆಗಳಿಗೆ ಸುಸ್ಥಿರವಾದ ಸಂಪನ್ಮೂಲಗಳನ್ನು ಮೀಸಲಿಡಬೇಕಾಗಿದೆ.

17. ನಿರ್ದಿಷ್ಟವಾಗಿ ಬಡವರು ಆರೋಗ್ಯ ಭದ್ರತೆಯ ಅಭಾವದಿಂದಾಗಿ ದುರ್ಬಲರಾಗಿದ್ದಾರೆ. ನನ್ನ ಸರ್ಕಾರವು ಎಲ್ಲರಿಗೂ ಗುಣಮಟ್ಟದ ಆರೋಗ್ಯ ಪಾಲನೆಯನ್ನು ಪಡೆಯುವ ಅವಕಾಶ ಮತ್ತು ಅದರ ಲಭ್ಯತೆಯಲ್ಲಿ ಸುಧಾರಣೆ ತರುವ ಬಗ್ಗೆ ಒತ್ತು ನೀಡಲಿದೆ. ಆರೋಗ್ಯ ಪಾಲನೆಯಲ್ಲಿನ ಪ್ರಾದೇಶಿಕ ತಾರತಮ್ಯಗಳನ್ನು ನಿವಾರಿಸುವ ಸಲುವಾಗಿ ದೃಢವಾದ ಕ್ರಮವನ್ನು ಕೈಗೊಳ್ಳಲಾಗುವುದು. ವೈದ್ಯಕೀಯ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗುವ ಅಗತ್ಯವಿರುವ ಬಡತನ ರೇಖೆಗಿಂತ ಕೆಳಗಿನ (ಬಿಪಿಎಲ್) ಕುಟುಂಬಗಳಿಗೆ ಮತ್ತು ಹಿರಿಯ ನಾಗರಿಕರಿಗೆ ಆರೋಗ್ಯ ಸೇವಾ ನೀಡಿಕೆದಾರರ ಜಾಲದ ಮುಖಾಂತರ ಗುರುತಿಸಲ್ಪಟ್ಟ ವಿಶೇಷ ಸೇವೆಗಳು ದೊರೆಯುವಂತೆ ಮಾಡುವ ವ್ಯವಸ್ಥೆಯನ್ನು ನಾವು ಸುಧಾರಿಸಲಿದ್ದೇವೆ. ಈಗ ಇರುವ ಎಲ್ಲಾ ಆರೋಗ್ಯ ವಿಮಾ ಯೋಜನೆಗಳನ್ನು ಪರಿಶೀಲಿಸಿ, ಅವುಗಳನ್ನು ಒಂದು ಸಮಗ್ರ ಏಕೀಕೃತ ಯೋಜನೆಯಡಿಯಲ್ಲಿ ತರಲಾಗುವುದು, ಔಷಧಿಗಳು ನ್ಯಾಯಸಮ್ಮತವಾಗಿ ದೊರೆಯುವಂತಾಗಲು ಮತ್ತು ಅವುಗಳು ಸಕಾಲದಲ್ಲಿ ಮತ್ತು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿರುವುದನ್ನು ಖಚಿತಪಡಿಸಿಕೊಳ್ಳಲು ಕ್ರಮಗಳನ್ನು ಕೈಗೊಳ್ಳಲಾಗುವುದು. ನನ್ನ ಸರ್ಕಾರವು ರಾಷ್ಟ್ರೀಯ ನಗರ ಆರೋಗ್ಯ ಮಿಷನ್‌ನ ಸ್ಥಾಪನೆಯನ್ನು ಸ್ವಾಗತಿಸುವುದು ಮತ್ತು ಈ ಕಾರ್ಯಕ್ರಮವನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಎಲ್ಲ ಕ್ರಮಗಳನ್ನು ಕೈಗೊಳ್ಳುವುದು.

18. ಹೆಚ್ಚುತ್ತಿರುವ ನಗರೀಕರಣದಿಂದಾಗಿ ದುರ್ಬಲ ವರ್ಗಗಳು ಮತ್ತು ಪ.ಜಾ/ಪ.ಪಂ/ ಅಲ್ಪಸಂಖ್ಯಾತ ಸಮುದಾಯಗಳ ಜನರಿಗೆ ಸಂಬಂಧಿಸಿದಂತೆ ವಸತಿಗಳ ಬೇಡಿಕೆ ಮತ್ತು ಪೂರೈಕೆ ನಡುವೆ ಅಂತರಕ್ಕೆ ಕಾರಣವಾಗಿದೆ. ನನ್ನ ಸರ್ಕಾರವು 'ಕೈಗೆಟಕುವ ಬೆಲೆಯಲ್ಲಿ ಎಲ್ಲರಿಗೂ ವಸತಿ' ಕಲ್ಪಿಸುವ ತನ್ನ ಧ್ಯೇಯೋದ್ದೇಶದ ಈಡೇರಿಕೆಗಾಗಿ ಕಾಲಬದ್ಧ ಅವಧಿಯೊಳಗೆ ವಸತಿ ಸೌಕರ್ಯ ಕಲ್ಪಿಸಲು ಕರ್ನಾಟಕ ಗೃಹ ಮತ್ತು ವಸತಿ ನೀತಿ, 2009ನ್ನು ಪುನರ್‌ಪರಿಶೀಲಿಸಲಿದೆ. ನನ್ನ ಸರ್ಕಾರವು ಬಡಜನರಿಗಾಗಿ ನಿರ್ಮಿಸುವ ಮನೆಗಳ ಯೂನಿಟ್ ವೆಚ್ಚವನ್ನು ಗ್ರಾಮೀಣ ಪ್ರದೇಶದಲ್ಲಿ 1.50 ಲಕ್ಷ ರೂ.ಗಳಿಗೆ

ಮತ್ತು ನಗರ ಪ್ರದೇಶಗಳಲ್ಲಿ 2.00 ಲಕ್ಷ ರೂ.ಗಳಿಗೆ ಹೆಚ್ಚಿಸಿದೆ ಮತ್ತು ಪ್ರತಿಯೊಂದು ಮನೆಗೆ ನೀಡಲಾಗುವ ಸಹಾಯಧನದ ಮೊತ್ತವನ್ನು 75,000 ರೂ,ಗಳಿಂದ 1.20 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ. ರಾಜ್ಯದಲ್ಲಿ ವಸತಿ ಸೌಕರ್ಯ ಒದಗಿಸುವಲ್ಲಿ ನಿರತವಾಗಿರುವ ಅನೇಕ ಅನುಷ್ಠಾನ ಸಂಸ್ಥೆಗಳ ನಡುವೆ ಭೌತಿಕ ಮತ್ತು ಆರ್ಥಿಕ ಗುರಿಯ ಸಾಧನೆಯ ಮೇಲ್ವಿಚಾರಣೆ ಮಾಡುವುದಕ್ಕೆ ಮತ್ತು ಕರ್ನಾಟಕ ರಾಜ್ಯವನ್ನು 'ಗುಡಿಸಲು – ರಹಿತ' ರಾಜ್ಯವನ್ನಾಗಿ ಮಾಡುವುದಕ್ಕೆ ನಾವು ಕೇಂದ್ರೀಕೃತ ಮಾಹಿತಿ ಕೇಂದ್ರವನ್ನು ಸ್ಥಾಪಿಸುತ್ತೇವೆ. ರಾಜ್ಯವನ್ನು, 'ಕೊಳಗೇರಿ–ಮುಕ್ತ' ರಾಜ್ಯವನ್ನಾಗಿ ಮಾಡುವುದಕ್ಕೆ ನಾವು ರಾಜೀವ್ ಆವಾಸ್ ಯೋಜನೆಯ ಸಂಪೂರ್ಣ ಪ್ರಯೋಜನವನ್ನು ಪಡೆಯಲಿದ್ದೇವೆ.

19. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ನವೀಕರಣಗೊಳಿಸಲು ಮತ್ತು ಸುವ್ಯವಸ್ಥಿತಗೊಳಿಸಲು ನಾವು ಅತ್ಯಂತ ಹೆಚಿನ ಆದ್ಯತೆಯನ್ನು ನೀಡುತ್ತೇವೆ. ನನ್ನ ಸರ್ಕಾರವು, ಈಗಾಗಲೇ ಬಿ.ಪಿ.ಎಲ್. ಕಾರ್ಡುದಾರರಿಗೆ 2013ರ ಜುಲೈ 1ರಿಂದ ಜಾರಿಗೆ ಬರುವಂತೆ ಒಂದು ಕುಟುಂಬಕ್ಕೆ 1 ಕಿ.ಗ್ರಾಂ.ಗೆ 1ರೂ.ನಂತೆ 30ಕಿ.ಗ್ರಾಂ. ಅಕ್ಕಿಯನ್ನು ವಿತರಿಸಲು ತೀರ್ಮಾನಿಸಿದೆ.

20. ನನ್ನ ಸರ್ಕಾರವು, ಇತ್ತೀಚಿನ ದಿನಮಾನಗಳಲ್ಲಿ ಅನೇಕ ತೀವ್ರ ಬರ ಪರಿಸ್ಥಿತಿಗಳಿಂದ ಕಂಗೆಟ್ಟಿರುವ ರೈತರ ಬದುಕಿಗೆ ನೆಮ್ಮದಿಯನ್ನು ಮತ್ತು ಘನತೆಯನ್ನು ಮರಳಿ ತರಲು ಶ್ರಮಿಸುತ್ತದೆ. ನಾವು ಕೃಷಿ ಪ್ರಕ್ರಿಯೆಯನ್ನು ಹೆಚ್ಚು ವೈಜ್ಞಾನಿಕಗೊಳಿಸಿ, ಅದರಿಂದ ಹೆಚ್ಚು ಪ್ರತಿಫಲ ದೊರೆಯುವಂತೆ ಮಾಡುವ ಮೂಲಕ ಕೃಷಿಕರು ನಗರ ಪ್ರದೇಶಗಳಿಗೆ ವಲಸೆ ಹೋಗುವುದನ್ನು ಪರಿಣಾಮಕಾರಿಯಾಗಿ ತಪ್ಪಿಸಲು ದೃಢಸಂಕಲ್ಪದ ಪ್ರಯತ್ನಗಳನ್ನು ಮಾಡುತ್ತೇವೆ. ನನ್ನ ಸರ್ಕಾರವು ಕೃಷಿ ಬೆಲೆ ಆಯೋಗವನ್ನು ಸಹ ಸ್ಥಾಪಿಸುವುದು. ನಿರಂತರವಾಗಿ ಕೃಷಿ ಭೂಮಿಯ ಪರಿವರ್ತನೆಯಾಗುವುದನ್ನು ಸಮತೋಲನಗೊಳಿಸಲು ಇಡೀ ಕೃಷಿ ವಲಯದಲ್ಲಿ ಬೆಳೆ ಉತ್ಪಾದನೆಯನ್ನು ಹೆಚ್ಚಿಸಲಾಗುವುದು. ಸಣ್ಣ ರೈತರ ಜೀವನೋಪಾಯವನ್ನು ಸುಭದ್ರಗೊಳಿಸಲು ಭೂ ಚೇತನ ಯೋಜನೆಯನ್ನು ವಿಸ್ತರಿಸಲಾಗುವುದು. ಅಂತರಾಷ್ಟ್ರೀಯ ಸಂಸ್ಥೆಗಳ ಪರಿಣತಿಯನ್ನು ಖಾಸಗಿ ವಲಯದಲ್ಲಿ ವಿಸ್ತರಣಾ ಸೇವೆಗಳನ್ನು ಸೃಜಿಸುವುದಕ್ಕೆ ಬಳಸಿಕೊಳ್ಳಲಾಗುವುದು, ಇದರಿಂದ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದರ ಜೊತೆಗೆ ಕೃಷಿ ಪದವೀಧರರಿಗೆ ಉತ್ತಮ ಉದ್ಯಮಿಗಳಾಗುವುದಕ್ಕೆ ಆರಂಭದ ವೇದಿಕೆಯನ್ನು ಒದಗಿಸಿಕೊಟ್ಟಂತಾಗುತ್ತದೆ. ಜಲಾನಯನ ಯೋಜನೆಗಳನ್ನು ಕಾಲಬದ್ಧ ಅವಧಿಯಲ್ಲಿ ಬರಪೀಡಿತವಾದ ಎಲ್ಲಾ ಖುಷ್ಕಿ ಭೂಮಿಗಳಿಗೂ ವಿಸ್ತರಿಸಲಾಗುವುದು.

21. ಕರ್ನಾಟಕವು ವೈವಿಧ್ಯಮಯವಾದ ತೋಟಗಾರಿಕಾ ಬೆಳೆಗಳಿಗೆ ತಕ್ಕುದಾದ ವೈವಿಧ್ಯಮಯ ಕೃಷಿ ಹವಾಮಾನ ವಲಯಗಳಿಂದ ಕೂಡಿದೆ. ರೈತರು ತೋಟಗಾರಿಕಾ ಬೆಳೆಗಳನ್ನು ಬೆಳೆಯುವುದಕ್ಕೆ ಈಗಲೂ ಕೇವಲ ಶೇ.15ರಷ್ಟು ಭೂಮಿಯನ್ನು ಬಳಸುತ್ತಿದ್ದರೂ, ನಾವು ತೋಟಗಾರಿಕಾ ಉತ್ಪನ್ನವೊಂದರಿಂದಲೇ ಕೃಷಿ ಆದಾಯದ ಶೇ.40ರಷ್ಟು ಆದಾಯವನ್ನು ಗಳಿಸುತ್ತಿದ್ದೇವೆ. ರಫ್ತು ಮತ್ತು ಮೌಲ್ಯವರ್ಧನೆಗೆ ಉತ್ತೇಜನ ನೀಡುವ ಸಲುವಾಗಿ, ನಾವು ಹೈಟೆಕ್ ಕ್ಲಸ್ಟರ್‌ಗಳನ್ನು ಸ್ಥಾಪಿಸುವ ಮೂಲಕ ದೇಶದಲ್ಲಿನ ಮತ್ತು ವಿದೇಶದಲ್ಲಿನ ಕೃಷಿ–ವ್ಯವಹಾರದ ಪರಿಧಿಗೆ ತೋಟಗಾರಿಕಾ ರೈತರನ್ನು ತರಲು ಉದ್ದೇಶಿಸಿದ್ದೇವೆ. ತೋಟಗಾರಿಕೆ ಮಾರುಕಟ್ಟೆಯ ಇಡೀ ವ್ಯವಸ್ಥೆಯನ್ನು ರೈತರ ಅಗತ್ಯತೆಗಳಿಗೆ ಹೆಚ್ಚು ಸ್ಪಂದನಶೀಲವಾಗಿರುವಂತೆ ನವೀಕರಿಸಲಾಗುವುದು.

22. ಕರ್ನಾಟಕವು ಒಂದು ಪ್ರಮುಖ ಹಾಲು ಉತ್ಪಾದಕ ರಾಜ್ಯವಾಗಿದೆ. ಪಶುಸಂಗೋಪನೆಯು ರಾಜ್ಯದಲ್ಲಿ ಕೇವಲ ಒಂದು ಪೂರಕ ವೃತ್ತಿಯಾಗಿ ಉಳಿಯದೆ ಪ್ರಧಾನ ವೃತ್ತಿಯಾಗುತ್ತಿದೆ. ಇದು ಬರ ಪರಿಸ್ಥಿತಿಯನ್ನು ಎದುರಿಸಲು ಅವಕಾಶ ಇರುವ ಪ್ರಮುಖ ಅಸ್ತ್ರವಾಗಿದೆ. ನನ್ನ ಸರ್ಕಾರವು ಹಾಲು ಉತ್ಪಾದಕರಿಗೆ ಪ್ರತೀ ಲೀಟರ್ ಹಾಲಿಗೆ ಪ್ರೋತ್ಸಾಹಧನವನ್ನು 2 ರೂ.ಗಳಿಂದ 4 ರೂ.ಗಳಿಗೆ ಹೆಚ್ಚಿಸಿದೆ. ಇದರಿಂದ 45 ಲಕ್ಷ ರೈತರಿಗೆ ಅನುಕೂಲವಾಗಲಿದೆ. ಪಶುಸಂಗೋಪನಾ ವಲಯವನ್ನು ಕೃಷಿ ಮತ್ತು ತೋಟಗಾರಿಕೆಗೆ ಪರಿಣಾಮಕಾರಿಯಾಗಿ ಪೂರಕವಾಗುವಂತೆ ಮಾಡಲು ನನ್ನ ಸರ್ಕಾರವು ಮಂಗಳೂರಿನ ಮೀನುಗಾರಿಕಾ ಕಾಲೇಜನ್ನು ಮತ್ತು ರಾಜ್ಯದ ಪಶುವೈದ್ಯಕೀಯ ವಿಶ್ವವಿದ್ಯಾಲಯಗಳನ್ನು ಆಧುನಿಕರಣಗೊಳಿಸಲಿದೆ.

23. ನನ್ನ ಸರ್ಕಾರವು ಅರಣ್ಯ ಮತ್ತು ನಮ್ಮ ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸಲು ಬದ್ಧವಾಗಿದೆ. ಇದಕ್ಕಾಗಿ, ಅರಣ್ಯ ಇಲಾಖೆಯು ಸರಹದ್ದುಗಳನ್ನು ನಿಗದಿಪಡಿಸಲು, ಒತ್ತುವರಿಗಳನ್ನು ತಡೆಯಲು ಮತ್ತು ಕಳ್ಳಬೇಟೆಯಾಡುವುದನ್ನು ಮತ್ತು ಅಗ್ನಿ ಅನಾಹುತಗಳನ್ನು ಪತ್ತೆಹಚ್ಚಲು ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಳ್ಳುತ್ತದೆ. ರೈತರು ತಮ್ಮ ಜಮೀನುಗಳಲ್ಲಿ ಮರಗಳನ್ನು ಬೆಳೆಸುವಂತೆ ಪ್ರೋತ್ಸಾಹಿಸಲಾಗುವುದು.

24. ನನ್ನ ಸರ್ಕಾರವು ಗ್ರಾಮ ಸಭೆಗಳನ್ನು ಬಲಪಡಿಸುವುದಕ್ಕೆ ಮತ್ತು ಅವುಗಳಿಗೆ ಅಧಿಕಾರ ನೀಡುವುದಕ್ಕೆ ಬದ್ಧವಾಗಿದೆ. ಫಲಾನುಭವಿಗಳ ಆಯ್ಕೆಯು ಸೇರಿದಂತೆ ಗ್ರಾಮಸಭೆಗಳು ಕೈಗೊಳ್ಳುವ ತೀರ್ಮಾನಗಳಿಗೆ ಅನುಷ್ಠಾನದ ಎಲ್ಲಾ ಹಂತಗಳಲ್ಲಿಯೂ ಮಾನ್ಯತೆ ದೊರೆಯುತ್ತಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವ ಎಲ್ಲಾ ಪ್ರಯತ್ನಗಳನ್ನು ನಾವು ಮಾಡುತ್ತೇವೆ. ಸಂವಿಧಾನದ 73ನೇ

ತಿದ್ದುಪಡಿಯನ್ನು ಗಮನದಲ್ಲಿರಿಸಿಕೊಂಡು, ಆಯವ್ಯಯದಲ್ಲಿ ಜಿಲ್ಲಾ ವಲಯ ಯೋಜನೆಗಳ ಪಾಲನ್ನು ಹೆಚ್ಚಿಸುವ ನಿಟ್ಟಿನಲ್ಲಿ ನಾವು ಮುನ್ನಡೆಯಲಿದ್ದೇವೆ. ನನ್ನ ಸರ್ಕಾರವು, ಕರ್ತವ್ಯಲೋಪವೆಸಗಿ ಪಂಚಾಯುತ್‌ರಾಜ್ ಸಂಸ್ಥೆಯ ಕಾರ್ಯನಿರ್ವಹಣೆಗೆ ಅಡ್ಡಿಯಾಗುವ ಗ್ರಾಮ ಪಂಚಾಯತ್ ಅಧ್ಯಕ್ಷರು ಇಲ್ಲವೇ ಸದಸ್ಯರನ್ನು ಅನರ್ಹಗೊಳಿಸಲು ಅವಕಾಶವಿರುವಂತೆ ಕಾನೂನುಗೆ ಸೂಕ್ತ ತಿದ್ದುಪಡಿ ಮಾಡಲು ಬದ್ಧವಾಗಿದೆ.

25. ಕರ್ನಾಟಕವು ದೇಶದಲ್ಲಿಯೇ ಎರಡನೇ ಅತಿ ಹೆಚ್ಚು ಬರ ಸಂಭವನೀಯ ಪ್ರದೇಶಗಳನ್ನು ಹೊಂದಿದೆ. ಬರದ ಸಮಸ್ಯೆಯನ್ನು ಪಾರದರ್ಶಕವಾದ ಮತ್ತು ಪರಿಣಾಮಕಾರಿಯಾದ ರೀತಿಯಲ್ಲಿ ಎದುರಿಸಲು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಎಂಜಿಎನ್‌ಆರ್‌ಇಜಿಎಸ್) ಒಂದು ಪ್ರಮುಖ ಅಸ್ತ್ರವಾಗಲಿದೆ. ಇದು ಒಂದು ಬೃಹತ್ ಸಾಮಾಜಿಕ ಸುರಕ್ಷಾಜಾಲ ಕಾರ್ಯಕ್ರಮವಾಗಿದೆ. ಇದು ಪುರುಷರು ಮತ್ತು ಮಹಿಳೆಯರಿಗೆ ಸಮಾನ ಕೂಲಿಯೊಂದಿಗೆ, ಗ್ರಾಮೀಣ ಬಡಜನರನ್ನು ಆರ್ಥಿಕವಾಗಿ ಸದೃಢಗೊಳಿಸುವ ಹಕ್ಕು-ಆಧಾರಿತ ಕಾರ್ಯಕ್ರಮವಾಗಿದೆ. ಸಕಾಲದಲ್ಲಿ ಮಜೂರಿ ಸಂದಾಯ ಮಾಡುವ ಮತ್ತು ಮಾನವ ಕೆಲಸದ ದಿನಗಳನ್ನು ಹೆಚ್ಚಿಸುವ ಹಾಗೂ ವ್ಯವಸ್ಥಿತ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಕೈಗೊಳ್ಳುವ ಮೂಲಕ ಈ ಕಾರ್ಯಕ್ರಮದ ಅನುಷ್ಠಾನದಲ್ಲಿ ಸುಧಾರಣೆ ತರಲು ನನ್ನ ಸರ್ಕಾರವು ಪ್ರಯತ್ನಿಸುವುದು. ನನ್ನ ಸರ್ಕಾರವು ಮಹಿಳಾ ಸಬಲೀಕರಣ ಮತ್ತು ಸಂಘಟನೆಗೆ ವಿಶೇಷ ಒತ್ತು ನೀಡುವುದರೊಂದಿಗೆ ನಿರ್ಗತಿಕರು ಹಾಗೂ ಬಡವರಿಗೆ ಪ್ರಯೋಜನಗಳನ್ನು ವಿಸ್ತರಿಸಲು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಅನ್ನು ಸ್ಥಾಪಿಸಲಿದೆ.

26. ನಗರ ಪ್ರದೇಶಕ್ಕೆ ನೀಡುವಂತೆ ಗ್ರಾಮೀಣ ಪ್ರದೇಶದಲ್ಲಿರುವ ಜನತೆಗೂ ಸುರಕ್ಷಿತ ಕುಡಿಯುವ ನೀರನ್ನು ಒದಗಿಸಲು ಸರ್ಕಾರ ಬದ್ಧವಾಗಿದೆ. ರಾಜ್ಯದಲ್ಲಿ ಫ್ಲೋರೈಡ್, ಆರ್ಸೆನಿಕ್, ನೈಟ್ರೇಟ್ ಮತ್ತಿತರ ವಿಷಕಾರಕ ಅಂಶಗಳನ್ನು ಹೊಂದಿರುವ 5,875 ಗ್ರಾಮಗಳಿವೆ. ಗದಗ್ ಜಿಲ್ಲೆಯ ರೀತಿಯಲ್ಲೇ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ರಾಜ್ಯದಲ್ಲಿ ನೀರಿನ ಸಮಸ್ಯೆಗಳನ್ನು ಎದುರಿಸುತ್ತಿರುವ ಎಲ್ಲಾ ಗ್ರಾಮಗಳಲ್ಲಿಯೂ ಸ್ಥಾಪಿಸಲಾಗುವುದು. 2014ರ ಜನವರಿ ರಿಂದಲೇ ಇಂತಹ ಸಾವಿರ ಘಟಕಗಳಿಗೆ ಚಾಲನೆ ನೀಡಲಾಗುವುದು. ಈ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರ 2013--14ರ ಆಯುವ್ಯಯದಲ್ಲಿ ರೂ.1,400 ಕೋಟಿಗಳನ್ನು ಒದಗಿಸಿರುವುದಕ್ಕೆ ನಾನು ಆಭಾರಿಯಾಗಿದ್ದೇನೆ.

27. ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯಕರ ಮತ್ತು ಸ್ವಚ್ಛ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲಾಗುವುದು. ನಿರ್ಮಲ ಭಾರತ ಅಭಿಯಾನ ಯೋಜನೆಯಡಿ ಕೇಂದ್ರ ಸರ್ಕಾರ ನೀಡುವ ಆರ್ಥಿಕ ನೆರವನ್ನು ಬಳಸಿಕೊಂಡು ರಾಜ್ಯದಲ್ಲಿ 60 ಲಕ್ಷ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಲಾಗುವುದು. ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯನ್ನು ಅನುಷ್ಠಾನಕ್ಕೆ ತರುವ ಮೂಲಕ ರಸ್ತೆಗಳ ಗುಣಮಟ್ಟವನ್ನು ಸುಧಾರಣೆ ಮಾಡಲಾಗುವುದು.

28. ರಾಜ್ಯದಲ್ಲಿ ನೆನೆಗುದಿಗೆ ಬಿದ್ದಿರುವ 78 ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವುದು ನಮ್ಮ ಆದ್ಯತೆಯಾಗಲಿದೆ. ತೀವ್ರ ಬರಪೀಡಿತವಾಗಿರುವ ಚಿತ್ರದುರ್ಗ, ತುಮಕೂರು, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ನೀರನ್ನು ಒದಗಿಸಲು ನಾವು ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯೆಂದು ಸೇರ್ಪಡೆ ಮಾಡಲು ಕ್ರಮಗಳನ್ನು ಕೈಗೊಳ್ಳುತ್ತೇವೆ. ಕೋಲಾರ, ಚಿಕ್ಕಬಳ್ಳಾಪುರ ಮತ್ತು ತುಮಕೂರಿಗೆ ನೀರಾವರಿ ಯೋಜನೆಯಿಂದ ಕೆರೆಗಳನ್ನು ತುಂಬಿ ಕುಡಿಯುವ ನೀರನ್ನು ಒದಗಿಸುತ್ತೇವೆ. ಈ ದಿಸೆಯಲ್ಲಿ ಎತ್ತಿನಹೊಳೆ ಯೋಜನೆಯನ್ನು ಕಾರ್ಯಗತಗೊಳಿಸಲು ಸರ್ಕಾರ ಬದ್ಧವಾಗಿದೆ. ಇದಕ್ಕಾಗಿ ಕೇಂದ್ರ ನೆರವನ್ನೂ ಸಹ ಕೋರುತ್ತೇವೆ. ಈ ರೀತಿಯ ಇತರ ಯೋಜನೆಗಳ ಬಗ್ಗೆಯೂ ವೈಜ್ಞಾನಿಕ ಸಮೀಕ್ಷೆಯನ್ನು ನಡೆಸಿ ಕಾರ್ಯಗತಗೊಳಿಸಲು ಪ್ರಯತ್ನ ಮಾಡಲಾಗುವುದು ಕೃಷ್ಣಾ ನ್ಯಾಯಾಧಿಕರಣದ ಐತೀರ್ಪಿನ ಅನುಸಾರ 177 ಟಿಎಂಸಿ ನೀರನ್ನು ಬಳಸಿಕೊಳ್ಳಲು ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತವನ್ನು ಆದ್ಯತೆಯ ಮೇರೆಗೆ ಪ್ರಾರಂಭಿಸಲಾಗುವುದು. ಕಾವೇರಿ ಐತೀರ್ಪಿಗೆ ಅನುಸಾರವಾಗಿ ಕಾವೇರಿ ಜಲಾನಯನದ ಬಾಕಿ ಇರುವ ವಿಸ್ತರಣಾ, ನವೀಕರಣ ಮತ್ತು ಆಧುನಿಕರಣ ಯೋಜನೆಗಳಿಗೆ ಭಾರತ ಸರ್ಕಾರದ ಅನುಮೋದನೆಯನ್ನು ಕೋರಲಾಗುವುದು. ನೀರಾವರಿ ಸಾಮರ್ಥ್ಯಗಳನ್ನು ಹೆಚ್ಚಿಸುವ ಸಲುವಾಗಿ, ನನ್ನ ಸರ್ಕಾರವು ಅಚ್ಚುಕಟ್ಟು ಪ್ರದೇಶದಲ್ಲಿ ಹೊಸ ಕಿರು–ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಿದೆ. ಇತರ ಯೋಜನೆಗಳ ವೈಜ್ಞಾನಿಕ ಮೌಲ್ಯಮಾಪನ ಕಾರ್ಯವನ್ನು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು. ನನ್ನ ಸರ್ಕಾರವು, ಸಣ್ಣ ನೀರಾವರಿ ಕಾಮಗಾರಿಗಳಿಗೆ, ಅದರಲ್ಲೂ ವಿಶೇಷವಾಗಿ ಬರಪೀಡಿತ ಪ್ರದೇಶಗಳಲ್ಲಿನ ಕೆರೆಗಳ ಪುನರುಜ್ಜೀವನಕ್ಕೆ ಪ್ರಾಮುಖ್ಯತೆ ಹಾಗೂ ಆದ್ಯತೆಯನ್ನು ನೀಡುತ್ತದೆ. ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ, 2011ರ ಅನುಸಾರ

ಅಂತರ್ಜಲದ ಮಿತಿಮೀರಿದ ಬಳಕೆಯನ್ನು ತಡೆಗಟ್ಟಲು ಮತ್ತು ಅಂತರ್ಜಲವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು.

29. ನನ್ನ ಸರ್ಕಾರವು ವಿದ್ಯುತ್ ವಲಯಕ್ಕೆ ಅತಿ ಹೆಚ್ಚಿನ ಆದ್ಯತೆಯನ್ನು ನೀಡುತ್ತದೆ. ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು. ನೆನೆಗುದಿಗೆ ಬಿದ್ದಿರುವ ಯೋಜನೆಗಳನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸಲಾಗುವುದು. ಅದೇ ಸಮಯಕ್ಕೆ, ನಾವು ವಿದ್ಯುತ್ ವಿತರಣಾ ನಷ್ಟಗಳನ್ನು ಕಡಿಮೆ ಮಾಡಲಿದ್ದೇವೆ. ಕಲ್ಲಿದ್ದಲು ಪೂರೈಕೆ ಸಂಬಂಧದ ಕಾರಣದಿಂದ ಮತ್ತು ಪರಿಸರ ವಿಷಯಗಳ ಕಾರಣದಿಂದ ತಡೆಹಿಡಿಯಲ್ಪಟ್ಟಿರುವ ವಿದ್ಯುತ್ ಯೋಜನೆಗಳಿಗೆ ಅನುಮೋದನೆಗಳನ್ನು ಪಡೆಯುವ ಸಲುವಾಗಿ ನನ್ನ ಸರ್ಕಾರವು ಗಂಭೀರ ಪ್ರಯತ್ನಗಳನ್ನು ಮಾಡಲಿದೆ. ನಾವು ವಿಶೇಷವಾಗಿ ಸೋಲಾರ್ ಪಂಪುಗಳು ಮತ್ತು ಉಪಕರಣಗಳಿಗಾಗಿ ನವೀಕರಿಸಬಹುದಾದ ಇಂಧನ ನೀತಿಯ ಮುಖಾಂತರ ಶುದ್ಧ ಮತ್ತು ಹಸಿರು ಇಂಧನಕ್ಕೆ ಉತ್ತೇಜನ ನೀಡುತ್ತೇವೆ.

30. ಕಾಮಗಾರಿಗಳ ನಿರ್ವಹಣೆಯಲ್ಲಿ ಅತ್ಯಂತ ಹೆಚ್ಚಿನ ಪಾರದರ್ಶಕತೆ ಮತ್ತು ದಕ್ಷತೆಯನ್ನು ಖಾತ್ರಿಪಡಿಸುವುದಕ್ಕೆ ಲೋಕೋಪಯೋಗಿ ಇಲಾಖೆಗೆ ಹೊಸ ರೂಪ ನೀಡಲು ಉದ್ದೇಶಿಸಲಾಗಿದೆ. ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳು ಹಾಗೂ ಜಿಲ್ಲಾ ಮುಖ್ಯ ರಸ್ತೆಗಳನ್ನು ಮೇಲ್ದರ್ಜೆಗೇರಿಸಲು ಆದ್ಯತೆ ನೀಡಲಾಗುವುದು. ಪರಿಣಾಮಕಾರಿ ಮತ್ತು ಸಮಗ್ರ ಮರಳು ಗಣಿಗಾರಿಕೆ ನೀತಿಯನ್ನು ರೂಪಿಸಿ, ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

31. ನನ್ನ ಸರ್ಕಾರವು ಅಸಂಘಟಿತ ವಲಯದ ಎಲ್ಲಾ ಕಾರ್ಮಿಕರಿಗೆ ಕನಿಷ್ಠ ಕೂಲಿ, ಸುರಕ್ಷಿತ ಕೆಲಸದ ಸ್ಥಳಗಳು ಮತ್ತು ಆರೋಗ್ಯ, ವಿಮೆ, ಪಿಂಚಣಿ, ಹೆರಿಗೆ ಸೌಕರ್ಯ ಮತ್ತು ಉದ್ಯೋಗಿಗಳ ನಷ್ಟಪರಿಹಾರದಂತಹ ಸಾಮಾಜಿಕ ಭದ್ರತಾ ಸ್ತಂಭಗಳ ವ್ಯಾಪ್ತಿಯನ್ನು ಬಲಪಡಿಸುವುದಕ್ಕೆ ಹಾಗೂ ವಿಸ್ತರಿಸುವುದಕ್ಕೆ ಸಹ ಬದ್ಧವಾಗಿದೆ.

32. ನಗರದ ಜನಸಂಖ್ಯೆ ಪ್ರಸ್ತುತ ಶೇ.38ರಷ್ಟಿದ್ದು, ಅದು ರಾಜ್ಯದಲ್ಲಿ ತೀವ್ರವಾಗಿ ಬೆಳವಣಿಗೆ ಹೊಂದುತ್ತಿದೆ. ಆದರೆ ಅದಕ್ಕೆ ಬೆಂಬಲವಾಗಿ ಮೂಲಭೂತ ಸೌಕರ್ಯಗಳು ಇಲ್ಲ. ಆದ್ದರಿಂದ, ಎಲ್ಲಾ ನಗರ ಪ್ರದೇಶಗಳಲ್ಲಿ ಒಳಚರಂಡಿ, ಘನ ತ್ಯಾಜ್ಯ ನಿರ್ವಹಣೆ, ವಸತಿ ಮತ್ತು ಕುಡಿಯುವ ನೀರನ್ನು ಒದಗಿಸುವುದಕ್ಕೆ ಮೊದಲು ಆದ್ಯತೆಯಾಗಿ ಮಾಸ್ಟರ್ ಪ್ಲಾನ್‌ಗಳನ್ನು ಸಿದ್ಧಪಡಿಸಲಾಗುವುದು. ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಸಾರಿಗೆ, ವಸತಿ

ಮತ್ತು ವಿದ್ಯುತ್ ನಿಗಮಗಳು ಮುಂತಾದ ಎಲ್ಲಾ ಸೇವಾ ನೀಡಿಕೆದಾರರ ನಡುವೆ ಸೂಕ್ತ ಸಮನ್ವಯ ಸಾಧಿಸುವ ಮುಖಾಂತರ ಬೆಂಗಳೂರು ಅಭಿವೃದ್ಧಿಗೆ ಒತ್ತು ನೀಡಲಾಗುವುದು. ನನ್ನ ಸರ್ಕಾರವು, ಮೆಟ್ರೋ ಮೊದಲನೇ ಹಂತವನ್ನು ಪೂರ್ಣಗೊಳಿಸಿ, ಮೆಟ್ರೋ ಎರಡನೇ ಹಂತವನ್ನು ತ್ವರಿತವಾಗಿ ಕೈಗೆತ್ತಿಕೊಳ್ಳಲು ಬದ್ಧವಾಗಿದೆ.

33. ಸಂಸತ್ತು, ಹೈದರಾಬಾದ್-ಕರ್ನಾಟಕ ಪ್ರದೇಶದ ಆರು ಹಿಂದುಳಿದ ಜಿಲ್ಲೆಗಳಾದ ಗುಲ್ಬರ್ಗ, ಯಾದಗಿರಿ, ರಾಯಚೂರು, ಬೀದರ್, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ವಿಶೇಷ ಸ್ಥಾನಮಾನ ನೀಡುವುದಕ್ಕಾಗಿ ಭಾರತ ಸಂವಿಧಾನದ 371 (ಜೆ) ಅನುಚ್ಛೇದವನ್ನು ಸೇರ್ಪಡೆ ಮಾಡಿದೆ. ಅಂತರ್ - ಪ್ರಾದೇಶಿಕ ಮತ್ತು ಅಂತರ್-ಜಿಲ್ಲಾ ಅಸಮಾನತೆಯನ್ನು ತಗ್ಗಿಸುವ ಸಲುವಾಗಿ, ನನ್ನ ಸರ್ಕಾರವು ನಿಧಿಗಳ ಸಮಾನ ಹಂಚಿಕೆಗಳನ್ನು ದೃಢಪಡಿಸಿ ಹಾಗೂ ಆ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಗಾಗಿ ಉದ್ಯೋಗ ಮತ್ತು ಶಿಕ್ಷಣದಲ್ಲಿ ಅಗತ್ಯ ಮೀಸಲಾತಿಯನ್ನು ಕಲ್ಪಿಸಿ, ಒಂದು ಪ್ರತ್ಯೇಕ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸುವುದಕ್ಕಾಗಿ ಮೂರು ತಿಂಗಳುಗಳೊಳಗೆ ಅಗತ್ಯ ವಿನಿಯಮಗಳನ್ನು ರೂಪಿಸುತ್ತದೆ.

34. ನನ್ನ ಸರ್ಕಾರವು ಕಾಲಬದ್ಧ ಸೇವೆಗಳನ್ನು ಜನರ ಮನೆಬಾಗಿಲಿಗೆ ತಲುಪಿಸುವ ನಿಟ್ಟಿನಲ್ಲಿ ಕಂದಾಯ ಆಡಳಿತವನ್ನು ಸದೃಢಗೊಳಿಸಲು ಬದ್ಧವಾಗಿದೆ. ನನ್ನ ಸರ್ಕಾರವು ದುರ್ಬಲರು, ವೃದ್ಧರು ಮತ್ತು ವಿಕಲಚೇತನರಿಗೆ ಸಾಮಾಜಿಕ ಭದ್ರತಾ ಪಿಂಚಣಿಗಳನ್ನು ಸಕಾಲದಲ್ಲಿ ಮತ್ತು ಸೂಕ್ತ ರೀತಿಯಲ್ಲಿ ತಲುಪಿಸಲು ಹೆಚ್ಚಿನ ಮಹತ್ವವನ್ನು ನೀಡುತ್ತದೆ. ಎ.ಟಿ. ರಾಮಸ್ವಾಮಿ ಮತ್ತು ಬಾಲಸುಬ್ರಮಣ್ಯಂ ಸಮಿತಿಗಳ ಶಿಫಾರಸುಗಳನ್ನು ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಲು ಮುಖ್ಯಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಉನ್ನತಾಧಿಕಾರದ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಗಿದೆ. ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡಿಕೊಳ್ಳುವವರು ಹಾಗೂ / ಅಥವಾ ಒತ್ತುವರಿಗೆ ದುಷ್ಪ್ರೇರಿಸು-ವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು. ಸರ್ಕಾರವು ಭೂ ನೀತಿಯನ್ನು ಸಿದ್ಧಪಡಿಸುತ್ತದೆ ಹಾಗೂ ಅನುದಾನ ಅಥವಾ ಗುತ್ತಿಗೆ ನೀಡಿರುವ ಸರ್ಕಾರಿ ಜಮೀನುಗಳಿಗಾಗಿ ಭೂ ಲೆಕ್ಕಪರಿಶೋಧನಾ ವ್ಯವಸ್ಥೆಯನ್ನು ಪರಿಚಯಿಸುತ್ತದೆ.

35. ಸಮೃದ್ಧ ಕರ್ನಾಟಕವನ್ನು ನಿರ್ಮಿಸುವಲ್ಲಿ ನನ್ನ ಸರ್ಕಾರವು ಸ್ವಚ್ಛ, ಸ್ಥಿರ, ಪಾರದರ್ಶಕ, ಜನಪರ ಹಾಗೂ ಭ್ರಷ್ಟಾಚಾರ-ಮುಕ್ತ ಆಡಳಿತವನ್ನು ನೀಡಲು ನಿರ್ಧರಿಸಿದೆ. ಆಡಳಿತಾತ್ಮಕ ಸುಧಾರಣೆಗಳನ್ನು ಮೊನಚುಗೊಳಿಸು-

ವುದಕ್ಕೆ ಉತ್ತಮ ಆಡಳಿತ ಮತ್ತು ಕೌಶಲ ಸುಧಾರಣಾ ಕೇಂದ್ರವನ್ನು ಸ್ಥಾಪಿಸಲಾಗುವುದು. ನೌಕರರ ವರ್ಗಾವಣೆಯಲ್ಲಿ ನಿಷ್ಪಕ್ಷಪಾತ ಮತ್ತು ಪಾರದರ್ಶಕತೆ ತರಲು ಗಣಕೀಕೃತ ಸಲಹಾ ವ್ಯವಸ್ಥೆಯನ್ನು ಎಲ್ಲಾ ಇಲಾಖೆಗಳಿಗೆ ವಿಸ್ತರಿಸಲಾಗುವುದು. ಸರ್ಕಾರಿ ನೌಕರರ ವರ್ಗಾವಣೆಗಾಗಿ ಸ್ಪಷ್ಟವಾದ ನೀತಿಯನ್ನು ರೂಪಿಸಲಾಗಿದೆ. ನೇಮಕ, ಬಡ್ತಿ, ವರ್ಗಾವಣೆ ಮತ್ತು ಇತರ ಸೇವಾ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಅರ್ಹತೆ ಮತ್ತು ಸಾಧನೆ ಮಾತ್ರ ಮಾನದಂಡವಾಗಲಿದೆ. ಇದರಲ್ಲಿ ದುರುದ್ದೇಶ ಮತ್ತು ದ್ವೇಷದ ಭಾವನೆ ಇರುವುದಿಲ್ಲ ಸರ್ಕಾರಿ ನೌಕರರೂ ಕೂಡ ಕರ್ತವ್ಯ ಪಾಲನೆಯಲ್ಲಿ ವಿಫಲರಾಗದೆ ಸಾರ್ವಜನಿಕರಿಗೆ ಉತ್ತರದಾಯಿಯಾಗಿರಬೇಕು. ಆಡಳಿತ ದಕ್ಷತೆಯನ್ನು ಸಾಧಿಸುವಲ್ಲಿ ಇದೊಂದು ದೊಡ್ಡ ಹೆಜ್ಜೆಯಾಗುವುದೆಂದು ನನ್ನ ಸರ್ಕಾರವು ನಂಬಿದೆ. ಮೊಬೈಲ್ ಗವರ್ನೆನ್ಸ್, ಇ-ಡಿಸ್ಟ್ರಿಕ್ಟ್, ಇ-ಪ್ರೊಕ್ಯೂರ್ ಮೆಂಟ್ ಮತ್ತು ಇ-ನಾಗರಿಕ ಸೇವಾ ಕೇಂದ್ರಗಳಂತಹ ಇ-ಆಡಳಿತ ಉಪಕ್ರಮಗಳನ್ನು ರಾಜ್ಯಾದ್ಯಂತ ಪ್ರೋತ್ಸಾಹಿಸಬೇಕಾಗಿದೆ. ಎಲ್ಲಾ ಸರ್ಕಾರಿ ಸೇವೆಗಳನ್ನು ಅಡೆತಡೆ ರಹಿತವಾಗಿ ಮತ್ತು ಕಾಲಬದ್ಧವಾಗಿ ನೀಡುವುದಕ್ಕೆ ಸಕಾಲ ಸೇವಾ ಅಧಿನಿಯಮ, 2011ಕ್ಕೆ ಗುಣಾತ್ಮಕ ಸುಧಾರಣೆಗಳನ್ನು ತರಲು ಎರಡನೇ ಪೀಳಿಗೆಯ ಸುಧಾರಣೆಗಳನ್ನು ಪರಿಚಯಿಸಲಾಗುವುದು.

36. ಕರ್ನಾಟಕವು ಮುಖ್ಯ ವಿತ್ತೀಯ ಮತ್ತು ಸಾಲ ಸೂಚಕಗಳಿಗಾಗಿ ಶಾಸನಬದ್ಧ ಗರಿಷ್ಠ ಪರಿಮಿತಿಗಳಿಗೆ ಬದ್ಧವಾಗಿದೆ. ನನ್ನ ಸರ್ಕಾರವು ಅನಗತ್ಯ ಖರ್ಚುಗಳನ್ನು ಕಡಿಮೆ ಮಾಡಿ, ಸಹಾಯಧನಗಳ ಸಂಬಂಧದಲ್ಲಿ ಪರಿಣಾಮಕಾರಿ ಗುರಿಗಳನ್ನು ಇಟ್ಟುಕೊಳ್ಳುವ ಮೂಲಕ ಹಾಗೂ ಬಂಡವಾಳ ಹೂಡಿಕೆಯನ್ನು ಪ್ರೇರೇಪಿಸಿ ಬೆಳವಣಿಗೆಯ ಕಡೆ ಗಮನ ಕೇಂದ್ರೀಕರಿಸುವ ಮೂಲಕ ವೆಚ್ಚವನ್ನು ತರ್ಕಸಮ್ಮತವಾಗುವಂತೆ ಮಾಡುತ್ತದೆ. ಈ ಸಂಬಂಧ, ನನ್ನ ಸರ್ಕಾರವು ಕಾಲಬದ್ಧವಾಗಿ ಆಡಳಿತ ವೆಚ್ಚ ಸುಧಾರಣಾ ಆಯೋಗದ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರುತ್ತದೆ. ನನ್ನ ಸರ್ಕಾರವು ತೆರಿಗೆ ನಿರ್ವಹಣೆಯನ್ನು ಹೆಚ್ಚು ಪರಿಣಾಮಕಾರಿ ಮತ್ತು ಸಮರ್ಥವನ್ನಾಗಿ ಮಾಡುತ್ತದೆ ಹಾಗೂ ಯಾವುದೇ ಬಗೆಯ ತೆರಿಗೆಗಳ್ಳತನವನ್ನು ಕಿಂಚಿತ್ತೂ ಸಹಿಸುವುದಿಲ್ಲ. ಈ ಸುಧಾರಣಾ ಕ್ರಮಗಳು ಜನರು ನಮ್ಮಲ್ಲಿ ಇರಿಸಿರುವ ಆಶೋತ್ತರಗಳು ಈಡೇರಿಸಲು ಮತ್ತು ನಂಬಿಕೆಯನ್ನು ರುಜುವಾತುಪಡಿಸಲು ನಮಗೆ ಬಲ ನೀಡುತ್ತವೆಂದು ನಾನು ನಂಬಿದ್ದೇನೆ.

37.ಕರ್ನಾಟಕವನ್ನು ಇತರ ರಾಜ್ಯಗಳು ಮತ್ತು ರಾಷ್ಟ್ರಗಳು ಅನುಸರಿಸುವಂತಹ ಒಂದು ಮಾದರಿ ರಾಜ್ಯವನ್ನಾಗಿ ಮಾಡಲು ನಾವು

ಸಾಮೂಹಿಕವಾಗಿ ಇರಿಸಿಕೊಂಡಿರುವ ಗುರಿಗಳನ್ನು ಸಾಧಿಸಲು ತಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ. ಮುಂಬರುವ ದಿನಗಳಲ್ಲಿ, ಜನರ ನಿರೀಕ್ಷೆಗಳನ್ನು ನಾವು ಈಡೇರಿಸಬಹುದಾದ ರೀತಿಯಲ್ಲಿ ಪ್ರಗತಿಪರ ಶಾಸನಗಳನ್ನು ಅಂಗೀಕರಿಸುವುದಕ್ಕಾಗಿ ಎರಡೂ ಸದನಗಳು ಅರ್ಥಪೂರ್ಣ ಮತ್ತು ರಚನಾತ್ಮಕ ಚರ್ಚೆಗೆ ಸಾಕ್ಷಿಯಾಗುತ್ತವೆಂದು ನಾನು ನಂಬಿದ್ದೇನೆ. ಈ ಮಹತ್ತರ ಕಾರ್ಯದಲ್ಲಿ ತಮ್ಮೆಲ್ಲರಿಗೂ ಸಂಪೂರ್ಣ ಯಶಸ್ಸು ದೊರೆಯಲೆಂದು ಹಾರೈಸುತ್ತೇನೆ.

ಜೈ ಹಿಂದ್
ಜೈ ಕರ್ನಾಟಕ

(ಅನುಬಂಧ -1)

Hon'ble Chairman. Karnataka Legislative Council,

Hon'ble Speaker Karnataka Legislative Assembly.

Hon'ble Chief Minister of Karnataka,

Hon'ble Leader of the Opposition in the Assembly,

Hon'ble Leader of the Opposition in the Council,

Hon'ble Ministerrs, and

Hon'ble Members of the Karnataka Legislature

1. I extend a warm and hearty welcome to all of you to this joint session of the Karnataka Legislature, with a newly elected Legislative Assembly.

2. I am happy that during the Legislative Assembly Elections, 2013, the people of Karnataka have given a clear and unequivocal mandate to the new Government. People representing all castes, communities, religions and regions have exercised their franchise to make way for the new Government. All these men and women have reposed new hope, faith and confidence in the

Government. My Government is committed to realizing their hopes and aspirations. The people of Karnataka have voted for change. My Government is committed to living up to their expectations and will usher in visible improvement in their quality of life.

